ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 158 ಟಿಎನ್ಆರ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:30-03-2021.

## ಆದೇಶ

1. ಕಳೆದ ಒಂದು ವರ್ಷದಿಂದ ದೇಶವು ಕೋವಿಡ್-19 ಸೋಂಕಿನಿಂದ ಬಾಧಿತವಾಗಿ ವಿಪತ್ತು ಪರಿಸ್ಥಿತಿಯನ್ನು ಎದುರಿಸುತ್ತಿದೆ. ಈ ಉದ್ದೇಶಕ್ಕಾಗಿ ಕಳೆದ ಸಾಲಿನಲ್ಲಿ COVID-19 WarRoom ಅನ್ನು ಬಾಲಬ್ರೂಯಿ ಅತಿಥಿ ಗೃಹದಲ್ಲಿ ತೆರೆಯಲಾಗಿದ್ದು, ವಿವಿಧ ಆಯಾಮಗಳಿಂದ ಪಡೆಯಲಾದ ದತ್ತಾಂಶ, ವಿಶ್ಲೇಷಣೆ ಮತ್ತು ಅದರ ಆಧಾರದ ಮೇಲೆ ತೆಗೆದುಕೊಳ್ಳಲಾದ ಸಮಯೋಚಿತ ನಿರ್ಧಾರಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಸೋಂಕು ಪ್ರಸರಣವನ್ನು ನಿಯಂತ್ರಿಸಲು ಸಹಕಾರಿಯಾಗಿದೆ.

2. ಪ್ರಸ್ತುತ, ಕೋವಿಡ್-19 ಸೋಂಕು ಪ್ರಕರಣಗಳ ಸಂಖ್ಯೆ ಉಲ್ಬಣವಾಗುತ್ತಿರುವ ಈ ಸಮಯದಲ್ಲಿ COVID-19 WarRoomನ್ನು ಬಲಪಡಿಸುವ ಅವಶ್ಯಕತೆಯಿದ್ದು, ಆದೇಶ ಸಂಖ್ಯೆ: ಕಂಇ 158 ಟಿಎನ್ಆರ್ 2020 ದಿನಾಂಕ:29.03.2021ರಲ್ಲಿ ತಾಂತ್ರಿಕ ತಂಡವನ್ನು ಶ್ರೀ ವಿ. ಪೊನ್ನುರಾಜ್, ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಇವರ ಮೇಲುಸ್ತುವಾರಿಯಲ್ಲಿ ರಚಿಸಲಾಗಿದೆ.

3. ಕೋವಿಡ್-19 WarRoom ಅನ್ನು ಬಲಪಡಿಸಿ ಇನ್ನೂ ಹೆಚ್ಚಿನ ತಂತ್ರಜ್ಞಾನಗಳೊಂದಿಗೆ ವೈದ್ಯಕೀಯ ಇಲಾಖೆಯ ಸಮನ್ವಯದೊಂದಿಗೆ ನಿರ್ವಹಿಸುವ ಅವಶ್ಯಕತೆಯನ್ನು ಸರ್ಕಾರವು ಮನಗಂಡು ಪ್ರಸ್ತುತ ಬಾಲಬ್ರೂಯಿ ಅತಿಥಿ ಗೃಹದಿಂದ ಆರೋಗ್ಯ ಸೌಧ ಕಟ್ಟಡಕ್ಕೆ ಸ್ಥಳಾಂತರಿಸಲು ಮತ್ತು ಬಲಪಡಿಸಲು ಅನುಮತಿಸಿ ಆದೇಶಿಸಿದೆ.

4. ಕೋವಿಡ್ -19 WarRoom ಬಲವರ್ಧನೆ ಮತ್ತು ಉತ್ತಮ ಕಾರ್ಯಾಚರಣೆ ಹಾಗೂ ಸ್ಥಳಾಂತರಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸಲಕರಣೆಗಳನ್ನು ಒದಗಿಸತಕ್ಕದ್ದು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಆರೋಗ್ಯ ಸೌಧದಲ್ಲಿ ಸ್ಥಳಾವಕಾಶ ಕಲ್ಪಿಸಿ ಉತ್ತಮ ಕಾರ್ಯನಿರ್ವಹಣೆಗೆ ಸಹಕಾರ ನೀಡತಕ್ಕದ್ದು.

(ಅಂಜುಂ ಪರ್ವೇಜ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಗೂ
ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ
ವಿಪತ್ತು ನಿರ್ವಹಣಾ ಪ್ರಾಧಿಕಾರದ
ಕಾರ್ಯಕಾರಿ ಸಮಿತಿ

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.